**Andolana**

Date: 20-12-2020 Page No: 04

Edition: Mysore Language: Kannada

# ಎಸ್‌ಡಿಎಂ ಐಎಂಡಿಯಲ್ಲಿ ಇ-ಸಮ್ಮೇಳನ



ಮೈಸೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಯ ವತಿಯಿಂದ 'ವ್ಯವಹಾರ ನಿರ್ವಹಣೆಯ ನವೀನ ಮಾದರಿಗೆ ಹೊಂದಿಕೊಳ್ಳುವಿಕೆ-ಮುಂದಿನ ದಾರಿ' ವಿಷಯ ಕುರಿತು ಮೊದಲನೆಯ ಅಂತಾರಾಷ್ಟ್ರೀಯ ಇ-ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್ ಮಾತನಾಡಿ, ಸಾಂಕ್ರಾಮಿಕ ರೋಗದ ಈ ಸಮಯದಲ್ಲಿ ವ್ಯವಹಾರ ನಿರ್ವಹಣೆಗಿರುವ ಅವಕಾಶಗಳು ಮತ್ತು ಸವಾಲುಗಳ ಬಗ್ಗೆ ತಿಳಿಸಿದರು. ಸಮ್ಮೇಳನದ ಮುಖ್ಯಸ್ಥ ಡಾ.ಮೌಸುಮಿ ಸೇನ್ ಗುಪ್ತ ಮಾತನಾಡಿ, ಸಮ್ಮೇಳನದ ಉದ್ದೇಶಗಳ ಬಗ್ಗೆ ತಿಳಿಸಿ, ಸಹಯೋಗದೊಂದಿಗೆ ಸಂಶೋಧನೆ ನಡೆಸುವ ಸಲುವಾಗಿ, ಪರಸ್ಪರ ಸಂಪರ್ಕ ಹೊಂದುವ ಬಗ್ಗೆ ತಿಳಿಸಿದರು.

ಫ್ರಾನ್ಸ್‌ನ ಮಾಂಟ್ ಪೆಲ್ಲಿಯರ್ ಬಿಸಿನೆಸ್ ಸ್ಕೂಲ್‌ನ ನಿರ್ದೇಶಕ ಹಾಗೂ ಶಿಕ್ಷಣ ತಜ್ಞ ಮತ್ತು ಸಂಶೋಧನಾಕಾರ ಡಾ.ಮೋಎಜ್ ಬೆನ್ನೌರಿ ಉದ್ಘಾಟನಾ ಭಾಷಣ ಮಾಡಿ, ಪ್ರಸ್ತುತ ವ್ಯವಹಾರ ನಿರ್ವಹಣೆಯ ಸನ್ನಿವೇಶದಲ್ಲಿ, ಸಾಂಸ್ಥಿಕ ಆಡಳಿತದ ಸಂದರ್ಭದಲ್ಲಿ ಉನ್ನತ ಅಧಿಕಾರದ ಮಟ್ಟಕ್ಕೆ ಮಹಿಳಾ ನಾಯಕಿಯರು ತೊಡಗಿಸಿಕೊಳ್ಳುವಿಕೆಯ ಪ್ರಾಮುಖ್ಯತೆಯ ಬಗ್ಗೆ ವಿವರಿಸಿದರು.

ಸಮ್ಮೇಳನದಲ್ಲಿ ಮಾರುಕಟ್ಟೆ ಅಧ್ಯಯನ, ಹಣಕಾಸು, ಮಾನವ ಸಂಪನ್ಮೂಲ ನಿರ್ವಹಣೆ, ಅರ್ಥಶಾಸ್ತ್ರ, ಕಾರ್ಯಾಚರಣೆ ನಿರ್ವಹಣೆ, ವಿಶ್ಲೇಷಣೆ ಹಾಗೂ ಮಾಹಿತಿ ತಂತ್ರಜ್ಞಾನ ವಿಷಯಗಳ ಕುರಿತು ವಿಷಯ ಮಂಡನೆಯಾದವು.

'ವ್ಯವಹಾರ ನಿರ್ವಹಣೆಯ ನವೀನ ಮಾದರಿಗೆ ಹೊಂದಿಕೊಳ್ಳುವಿಕೆ' ಕುರಿತ ಪ್ಯಾನೆಲ್ ಸಂವಾದದಲ್ಲಿ ರವಿಕುಮಾರ್, ಹೇಮಂತ್, ದಿವಾಕರ್ ಗುಪ್ತ ತಮ್ಮ ಅನುಭವಗಳನ್ನು ಹಂಚಿಕೊಂಡರು. ಇ- ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅನುಜೀತ್ ವರದ್ಕರ್ ಅವರು ಭಾರತದ ಅರ್ಥವ್ಯವಸ್ಥೆಯಲ್ಲಿ ಮೈಕ್ರೋಫೈನಾನ್ಸ್‌ನ (ಕಿರುಹಣಕಾಸು) ಪ್ರಾಮುಖ್ಯತೆಯ ಬಗ್ಗೆ ತಿಳಿಸಿಕೊಟ್ಟರು.

**E-Conference on 'Adapting to the new Business Normal'**